Sri S. M. KRISHNA :

Yes. They have started and they are also starting their work in Thinthini in the next few days.

LICENCES TO S. C./S.T. TYRE AND KEROSENE DEALERS

293. Sri M. B. RAMASWAMY (Anekal) :

Will the Minister for Food and Forests be pleased to state :

(*a*) the number of Licences issued to Tyre Licence holders in Bangalore as well as in the State out of which how many are Scheduled Castes and Scheduled Tribes ;

(*b*) the number of licences issued to Kerosene Oil Dealers of which the number of licences issued to Scheduled Castes and Scheduled Tribes ?

Sri K. H. PATIL (Minister for Food and Forests) :

(*a*) 108 Licences have been issued in Bangalore Corporation area and 263 in the rest of Karnataka State.

Information regarding licences issued to Scheduled Castes and Scheduled Tribes is not available.

(*b*) 382 Wholesale, 3,691 Retail and 1,269 Hawkers Licences have been issued throughout the State.

Information regarding Scheduled Castes and Scheduled Tribes is not available.

ಶ್ರೀ ಎಂ. ಬಿ. ರಾಮಸ್ವಾಮಿ :—(ಎ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಎಸ್. ಸಿ. ಮತ್ತು ಎಸ್. ಟಿ. ಪಂಗಡಗಳವರಿಗೆ ಲೈಸೆನ್ಸ್ ಕೊಟ್ಟಿಲ್ಲವೆಂದು ಭಾವಿಸಬಹುದೆ ?

ಶ್ರೀ ಕೆ. ಎಚ್. ಪಾಟೀಲ :—ಎರಡೂ ಭಾವಿಸಬಹುದು, ಕೊಟ್ಟಿಲ್ಲ ಎಂದೂ ಅಥವಾ ಕೊಟ್ಟಿದ್ದಾರೆ ಎಂದೂ ಭಾವಿಸಬಹುದು.

ಶ್ರೀ ಎಂ. ಬಿ. ರಾಮಸ್ವಾಮಿ :—ನಾನು ಕೇಳಿರುವ ಸಮಾಚಾರವನ್ನು ಈಗಲಾದರೂ ಒದಗಿಸುವಿರಾ ?

ಶ್ರೀ ಕೆ. ಎಚ್. ಪಾಟೀಲ :—ಕಾಯಿದೆ ಪ್ರಕಾರ ನಿರ್ಬಂಧ ಮಾಡಲು ಬರುವುದಿಲ್ಲ, ಜಾತಿ ಕೇಳುವಂತಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ :—ಅನೇಕ ಹರಿಜನರು ಬೆಂಗಳೂರಿನಲ್ಲಿ ಇದಕ್ಕೆ ಅರ್ಜಿ ಹಾಕಿದ್ದರೆ ನಿರಾಕರಣೆ ಮಾಡಿದ್ದಾರೆ. ಆದುದರಿಂದ ಇದರ ಬಗ್ಗೆ ಮಾಹಿತಿ ಕೊಟ್ಟರೆ ದುರುದ್ದೇಶದಿಂದ ಲೈಸೆನ್ಸ್ ಕೊಡದಿರುವವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ :—ಎಲ್ಲ ರೀತಿಯಿಂದಲೂ ಅರ್ಹರಾದವರು ಅರ್ಜಿ ಹಾಕಿ ನಿರಾಕರಿಸಿದ ಅಪಾದನೆ ಸ್ಥಿರಪಟ್ಟರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ :—ಮಂತ್ರಿಗಳಿಗೆ ಅರ್ಜಿ ಕೊಡುವಾಗ ಜಾತಿ ನಮೂದು ಮಾಡಿ ಕೊಟ್ಟಿರುವುದಿಲ್ಲ. ಆದುದರಿಂದ ಅಂಕಿ ಅಂಶವಿಲ್ಲ ಎಂದು ಹೇಳುತ್ತಾರೆ. ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗ ಎಂಬುದು ಜಾತಿಯಲ್ಲ. ರಾಜ್ಯಾಂಗದಲ್ಲಿ ನಮೂದು ಮಾಡಿರುವ ಒಂದು ಪಟ್ಟಿ. ಅವರಿಗೆ ರಕ್ಷಣೆ ಸಿಕ್ಕಬೇಕು. ಆದುದರಿಂದ ಎಸ್. ಸಿ. ಮತ್ತು ಎಸ್. ಟಿ. ಟ್ರೈಬ್ಸ್‌ಗೆ ಅವಕಾಶ ಕೊಡುವಂತೆ ಸರ್ಕ್ಯುಲರ್ ಇಷ್ಯೂ ಮಾಡುವಿರಾ ?

ಶ್ರೀ ಕೆ. ಎಚ್. ಪಾಟೀಲ:—ಸರ್ಕ್ಯುಲರ ಅವಶ್ಯಕತೆ ಇಲ್ಲ. ಘಟನೆ ನಮ್ಮ ಎದುರಿಗೆ ಇರುವಾಗ ಅಂತಹ ಅರ್ಜಿಗಳಿಗೆ ಪ್ರಾಶಸ್ತ್ಯ ಕೊಡುತ್ತೇವೆ. ಆದುದರಿಂದ ಸರ್ಕ್ಯುಲರ ಕೊಡುವುದು ಅಪ್ರಕೃತ.

ಶ್ರೀ ಎಂ. ಬಿ. ರಾಮಸ್ವಾಮಿ:—ಸ್ವಾಮಿ, ತಾವು (ಅ) ಗೆ ಉತ್ತರವಾಗಿ ರಾಜ್ಯಾದ್ಯಂತ ೩೮೨ ಸಗಟು, ೩,೬೯೧ ಚಿಲ್ಲರೆ ಹಾಗೂ ೧,೨೬೯ ಕೈಗಾಡಿ ವ್ಯಾಪಾರಿಗಳಿಗೆ ಪರವಾನೆಗಳನ್ನು ನೀಡಲಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಇವರಿಗೆ ಪರವಾನೆ ಕೊಡಲು ಅನ್ಯಾಯ ವಾಗಿದೆ. ಆದುದರಿಂದ ತಮ್ಮ ಅವಧಿಯಲ್ಲಿ ಇದನ್ನು ಸಮಗ್ರವಾಗಿ ಯೋಚನೆ ಮಾಡಿ ಅವರಿಗೆ ನ್ಯಾಯ ವನ್ನು ಒದಗಿಸಿ ಕೊಡುವಂತೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ:—ನಾನು ಈಗಾಗಲೇ ಹೇಳಿದ್ದೇನೆ.. ಷೆಡ್ಯೂಲ್ಡ್ ಕಾಸ್ಟನವರು ಎಲ್ಲಿ ಇದ್ದಾರೆ ಅವರಿಗೆ ಅಂಗಡಿ ತಕ್ಷಣ ಸಿಕ್ಕುವುದಿಲ್ಲ. ಅವರು ಆ ಒಂದು ಕಂಡಿಷನ್‌ಗೆ ಅರ್ಹತೆ ಪಡೆದಿದ್ದರೆ ಅವರಿಗೆ ಪ್ರಾಶಸ್ತ್ಯ ಕೊಡಬೇಕು ಎನ್ನುವುದೇ ಸರ್ಕಾರದ ಧೋರಣೆ. ಏನಾದರೂ ಅದರಲ್ಲಿ ಅನ್ಯಾಯ ನಡೆದಿದ್ದರೆ ಅದನ್ನು ನನ್ನ ನಜರಿಗೆ ತಂದು ಕೊಟ್ಟರೆ ಅವರಿಗೆ ಯೋಗ್ಯ ರಿಲೀಫ್ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ:—ಅವರಿಗೆ ಎಲ್ಲಾ ಯೋಗ್ಯತೆ ಇದೆ. ಆದರೆ ಹಣದ ಅಭಾವ ಇರುವುದರಿಂದ ತಾವು ಅವರಿಗೆ ಉಳಿದವುಗಳಲ್ಲಿ ಯಾವ ರೀತಿ ಪ್ರಾಶಸ್ತ್ಯ ಕೊಡುತ್ತೀರೋ ಅದೇ ರೀತಿ ಇಂತಿಷ್ಟು ಪರ್ಸೆಂಟ್ ಹಣ ಕೊಟ್ಟು ಅವರನ್ನು ವ್ಯಾಪಾರದಲ್ಲಿ ತೊಡಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ:—ಈ ಸಭೆ ಒಪ್ಪಿದರೆ, ಅವರಿಗೆ ಪುಕ್ಕಟೆ ಹಣ ಕೊಡಬೇಕು ಎನ್ನುವುದಾದರೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್:—ತಾವು ಕೊಟ್ಟಿರುವ (ಬ) ಉತ್ತರ ನೋಡಿದರೆ ಈ ಸೀಮೆಯೆಣ್ಣೆ ಪರವಾನೆಯನ್ನು ಹಾಕರ್ಸಗೆ ಕಡಿಮೆ ಕೊಟ್ಟು ರೀಟೇಲರ್ಸಗೆ ಜಾಸ್ತಿ ಕೊಟ್ಟಿದ್ದೀರಾ. ಹಾಕರ್ಸೇ ಕಡುಬಡವರಾಗಿ ದ್ದಾರೆ. ಆದುದರಿಂದ ಅವರಿಗೆ ಹೆಚ್ಚು ಪರವಾನೆ ಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ: —ಈಗ ಕೊಟ್ಟಿರತಕ್ಕಂಥ ಲೈಸನ್ಸ್ ಹೆಚ್ಚಾಗಿದೆ. ನಮ್ಮ ರಾಜ್ಯದಲ್ಲಿ ಇನ್ನೂ ಅವಶ್ಯವಾಗಿ ಕೊಡಬೇಕು ಎಂದು ಎನಿಸಿದರೆ ಆವಾಗ ಹೆಚ್ಚು ಪರವಾನೆ ಕೊಡುವುದಕ್ಕೆ ಅವಕಾಶ ಮಾಡೋಣ.

CONSTRUCTION OF BUILDINGS FOR GOVERNMENT OFFICES IN MUDDEBIHAL

318. Sri M. M. SAJJAN (Muddebihal):—

Will the Minister for Public Works and Electricity be pleased to state:—

(*a*) whether there is any proposal of constructing buildings for all the offices of the Government at Muddebihal;

(*b*) if so, the estimated cost of each such buildings;

(*c*) the amount sanctioned for construction of these buildings;

(*d*) whether Government has secured sites for constructions these buildings;

(*e*) when the construction work of these buildings will be started ?

Sri H. M. CHANNABASAPPA (Minister for Public Works and Electricity).—

(*a*) No

(*b*) to (*e*) Do not arise in view of reply to clause (*a*) above.